8	ಕಾಮಗಾರಿ ಸೊಲಾರ್ ಲೈಟಿಂಗ್	ಟೆಂಡರ್ ಕರೆಯ ಬೇಕಾಗಿದೆ ಇಲಾಖೆ ಮಹಾನಗರ ಪಾಲಿಕೆ, ಗುಲ್ಬರ್ಗಾ
9	ಕಾಮಗಾರಿ ಎರೇಷನ್ ಫೌಂಟನ್	ಟೆಂಡರ್ ಕರೆಯ ಬೇಕಾಗಿದೆ ಇಲಾಖೆ ಮಹಾನಗರ ಪಾಲಿಕೆ, ಗುಲ್ಬರ್ಗಾ
10	ಕಾಮಗಾರಿ ಪ್ಲಾಂಟೇಷನ್	ಟೆಂಡರ್ ಕರೆಯಬೇಕಾಗಿದೆ ಇಲಾಖೆ ಅರಣ್ಯ ಇಲಾಖೆ

857(1155) ಶ್ರೀ ಚಂದ್ರಶೇಖರ್ ಪಾಟೀಲ್ ರೇವೂರ (ಗುಲ್ಬರ್ಗಾ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಮಹಾನಗರದ ಎಲ್ಲಾ ರಸ್ತೆಗಳು ಸಂಪೂರ್ಣ ಹಾಳಾಗಿ ಜನ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ರಸ್ತೆಗಳ ಪುನರ್ ನಿರ್ಮಾಣಕ್ಕೆ ಹಣ ಮಂಜೂರು ಮಾಡಲಾಗಿದೆಯೇ,

ಇ) ಹಾಗಿದ್ದಲ್ಲಿ, ಮಂಜೂರು ಮಾಡಲಾದ ಹಣವೆಷ್ಟು,

ಈ) ಈ ರಸ್ತೆಗಳನ್ನು ದುರಸ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಯವರು)

ಅ) ಗುಲ್ಬರ್ಗಾ ಮಹಾನಗರದ ಕೆಲವು ರಸ್ತೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ

ಆ) ರಸ್ತೆಗಳ ಪುನರ್ ನಿರ್ಮಾಣ ಕಾರ್ಯ ಮಹಾನಗರ ಪಾಲಿಕೆಯ ಕರ್ತವ್ಯವಾಗಿದೆ ಇದಲ್ಲದೇ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕೆ ಯೋಜನೆಯಡಿಯಲ್ಲಿ (NKUSIP) ರಸ್ತೆಗಳ ಮನರ್ ನಿರ್ಮಾಣಕ್ಕೆ ಹಣ ಮಂಜೂರು ಮಾಡಲಾಗಿದೆ (ಎ ಡಿ ಬಿ ಯೋಜನೆ)

ಇ) NKUSIP ಯೋಜನೆಯಡಿಯಲ್ಲಿ ರೂ 11 01 ಕೋಟಿಗಳನ್ನು ಒದಗಿಸಲಾಗಿದೆ

ಈ) ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲಿದ್ದು, ಅದರಂತೆ ದುರಸ್ತಿ ಕಾರ್ಯ ಕೈಗೊಳ್ಳಲಾಗುವುದು

859(1157) ಶ್ರೀ ಚಂದ್ರಶೇಖರ್ ಪಾಟೀಲ್ ರೇವೂರ (ಗುಲ್ಬರ್ಗಾ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಮಹಾನಗರದ ವರ್ತುಲ ರಸ್ತೆಯನ್ನು ಎಷ್ಟು ಕಿ ಮೀ ನಿರ್ಮಿಸಲಾಗಿದೆ, ಇದರ ಅಂದಾಜು ಮೊತ್ತ ಎಷ್ಟು,

ಆ) ವರ್ತುಲ ರಸ್ತೆಯನ್ನು ನಿರ್ಮಿಸಲು ಎಷ್ಟು ಎಕರೆ ಜಮೀನು ಸ್ವಾಧೀನ ಪಡಿಸಿಕೊಳ್ಳಲಾಗಿದೆ ಹಾಗೂ ಜಮೀನು ಸ್ವಾಧೀನಪಡಿಸಿಕೊಂಡ ರೈತರಿಗೆ ಪರಿಹಾರ ಧನ ನೀಡಲಾಗಿದೆಯೇ,

ಇ) ಹಾಗಿದ್ದಲ್ಲಿ ನೀಡಲಾಗಿರುವ ಪರಿಹಾರ ಧನ ಎಷ್ಟು (ಎಕರೆವಾರು ಪರಿಹಾರದ ವಿವರ ನೀಡುವುದು),

ಈ) ವರ್ತುಲ ರಸ್ತೆಯ 2 ಬದಿಗಳಲ್ಲಿ ಸರ್ವೀಸ್ ರಸ್ತೆಗಳನ್ನು ನಿರ್ಮಾಣ ಮಾಡಲಾಗಿದೆಯೇ ಹಾಗೂ ಮಾಡದಿದ್ದರೆ ಎಷ್ಟು ಕಿಮೀ ವರೆಗೆ ಮಾಡಲಾಗಿದೆ,

ಉ) ಈ ಸರ್ವೀಸ್ ರಸ್ತೆಯನ್ನು ಖಾಸಗಿಯವರು ಆಕ್ರಮಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯ,

ಊ) ಹಾಗಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ,

ಋ) ವರ್ತುಲ ರಸ್ತೆ ಹಾಗೂ ಸರ್ವೀಸ್ ರಸ್ತೆಗಳ ಕಾಮಗಾರಿಗಳನ್ನು ಯಾವ ಗುತ್ತಿಗೆದಾರರಿಗೆ ವಹಿಸಲಾಗಿದೆ,

ಎ) ಇದಕ್ಕೆ ಅನುಸರಿಸಿದ ಮಾನದಂಡಗಳೇನು,

ಏ) ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿದ ಸಮಯವೆಷ್ಟು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ಗುಲ್ಬರ್ಗಾ ಮಹಾನಗರದ ವರ್ತುಲ ರಸ್ತೆಯನ್ನು 15 50 ಕಿಮೀ ಉದ್ದಕ್ಕೆ ನಿರ್ಮಿಸಲಾಗಿದೆ ಮತ್ತು ಇದರ ಅಂದಾಜು ವೆಚ್ಚ ರೂ 20 27 ಕೋಟಿಗಳು

ಆ) ಇಲ್ಲಿಯವರೆಗೆ 15 50 ಕಿಮೀ ರಸ್ತೆಯ ನಿರ್ಮಾಣಕ್ಕಾಗಿ ಯಾವುದೇ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ ಆದರೆ ಇನ್ನುಳಿದ 8 00